
ಇಪ್ಪತ್ತೈದು ವರ್ಷಗಳ ತಮ್ಮ ಸುದೀರ್ಘ ಸೇವಾವಧಿಯಲ್ಲಿ ಒಮ್ಮೆಯೂ ಕಂಡಿರದ ಅಚ್ಚರಿಯನ್ನು ಆ ಕಚೇರಿಯ ಆಡಿಟಿಂಗ್‌ನಲ್ಲಿ ಕಂಡಿದ್ದರು ಭಗವಂತರಾವ್. ಅದು ಅಚ್ಚರಿಗಿಂತ ಮಿಗಿಲಾಗಿ, 'ಇಷ್ಟೊಂದು ಪ್ರಾಮಾಣಿಕವಾಗಿ ಮತ್ತು ಕರಾರುವಾಕ್ಕಾಗಿ ಒಂದು ಕಚೇರಿಯ ಆಡಳಿತವನ್ನು ನಡೆಸಲು ಸಾಧ್ಯವೇ?' ಎಂಬ ಪ್ರಶ್ನೆಯನ್ನು ಅವರಲ್ಲಿ ಹುಟ್ಟಿಹಾಕಿತ್ತು. ಆರು ಜನರಿದ್ದ ಆಡಿಟ್ ಟೀಮಿನ ಎಲ್ಲರೂ ಒಂಬತ್ತು ದಿನಗಳಿಂದ ನಿರಂತರ ನಡೆಸಿದ ಲೆಕ್ಕಪತ್ರ ತಪಾಸಣೆಯಲ್ಲಿ, ಎಷ್ಟೇ ಕಷ್ಟಪಟ್ಟರೂ ಒಂದೇ ಒಂದು ಕೊರತೆ ಅಥವಾ ತಪ್ಪನ್ನು ಹುಡುಕಲು ಸಾಧ್ಯವಾಗದಿದ್ದುದು ತಮ್ಮ ಆಡಿಟಿಂಗ್‌ನ ಬಗ್ಗೆಯೇ ಅವರಿಗೆ ಸಂಶಯ ಹುಟ್ಟಿಸಿತ್ತು. ಅಂಥ ಸ್ಥಿತಿಯಲ್ಲೇ ಕೊನೆಯ ದಿನಕ್ಕೆ ಕಾಲಿಟ್ಟಿದ್ದರು, ಇನ್ನೇನು ಅಂತಿಮ ವರದಿಯನ್ನು ಸಿದ್ಧಪಡಿಸಬೇಕು ಅನ್ನುವಷ್ಟರಲ್ಲಿ, ಟೀಮಿನ ಸದಸ್ಯರಲ್ಲಿ ಒಬ್ಬನಾಗಿದ್ದ ಆಲೋಕ್ ಕುಮಾರನು ಫೈಲೊಂದನ್ನು ಕೈಯಲ್ಲಿ ಹಿಡಿದುಕೊಂಡು ಗಡಬಡಿಸಿ ಓಡಿ ಬಂದವನೇ, 'ಸರ್, ಸರ್, ಇಲ್ನೋಡಿ... ಎಲ್ಲಿ ತಪ್ಪಿಸ್ಕೋತಾರೆ ಸರ್ ಇವರು? ನಮ್ಮ ಆಡಿಟ್ ಟೀಮ್ ಅಂದ್ರೆ ಏನಂದ್ಕೊಂಡಿದ್ದಾರೆ ಇವರು? ಇಲ್ನೋಡಿ ಸರ್...' ಎಂದು ಉತ್ಸಾಹದಿಂದ ತೋರಿಸತೊಡಗಿದ.



ಟೀಮಿನ ಎಲ್ಲರಿಗೂ 'ಓಹೋ ಕೊನೆಗೂ ಆಲೋಕ್ ಕುಮಾರ್ ಹಿಡಿದೇ ಬಿಟ್ಟರಲ್ಲ!' ಎಂದು ಖುಷಿಯೋ ಖುಷಿ. 'ಏನು... ಏನದು, ಎಲ್ಲಿ, ತೋರಿಸಿ ನೋಡೋಣ...' ಎಂದು ಕುತೂಹಲದಿಂದ ಕೇಳುತ್ತಿರುವಾಗಲೇ, ತನ್ನ ಕಣ್ಣಿಗೆ ಬಿದ್ದ ಒಂದು ತಪ್ಪಿನಂಥ ಭಾಗವನ್ನಾತ ಟೀಮ್ ಲೀಡರ್ ಭಗವಂತರಾವ್ ಅವರನ್ನೂ ಒಳಗೊಂಡಂತೆ ಎಲ್ಲರಿಗೂ ತೋರಿಸಿ, ತನ್ನ ಕೆಲಸದ ಬಗ್ಗೆ ಹೆಮ್ಮೆ ಪಡತೊಡಗಿದ. ಟೀಮಿನ ಎಲ್ಲ ಸದಸ್ಯರ ಮನಸ್ಸಿನಲ್ಲಿ ದೊಡ್ಡ ಸಾಹಸ ಮಾಡಿದ ಹೆಮ್ಮೆಯ ಭಾವ ಉಂಟಾದರೂ, ತಮ್ಮದು 'ಗುಡ್ಡ ಅಗಿದು ಇಲಿ ಹಿಡಿಯುವ' ಪ್ರಯತ್ನವಾಯಿತೆಂಬ ಸಣ್ಣ ಕೀಳಳುಕು ಒಳಗೊಳಗೇ ಕಾಡದೇ ಇರಲಿಲ್ಲ.

ಅಂದು ಆಡಿಟಿಂಗ್‌ನ ಕೊನೆಯ ದಿನವಾಗಿತ್ತು. ಆವತ್ತು ಸಂಜೆ ಭಗವಂತರಾವ್ ತಮ್ಮ ತಂಡವನ್ನೆಲ್ಲ, ನಿರ್ದೇಶಕರಾಗಿದ್ದ ಡಾ. ಸತ್ಯಾರ್ಥಿ ಚಟರ್ಜಿ ಅವರ ಕೋಣೆಗೆ ಕರೆದೊಯ್ದು, ಸೀಲ್ ಮಾಡಿದ ಲಕೋಟೆಯನ್ನು ಅವರ ಕೈಗಿತ್ತು, 'ತುಂಬ ಚೆನ್ನಾಗಿ ಕೆಲಸ ಮಾಡಿದೆ ಸರ್ ನಿಮ್ಮ ಕಚೇರಿ. ನಿಜ ಅಂದ್ರೆ, ಇಲ್ಲಿಯವರೆಗೆ ನಾವು ನಡೆಸಿದ ಆಡಿಟಿಂಗ್‌ನಲ್ಲಿ ಈ ಪ್ರಮಾಣದ ಕ್ಲೀಯರ್ ರಿಪೋರ್ಟ್ ಇದ್ದದ್ದು ನಿಮ್ಮ ಕಚೇರಿಯದು ಮಾತ್ರ. ನಿಮ್ಮನ್ನು ಹೊಗಳಲು ಈ ಮಾತು ಹೇಳ್ತಿಲ್ಲ. ಇಟ್ ಈಜ್ ರಿಯಲೀ ಎ ಫ್ಯಾಕ್ಟ್. ಹ್ಯಾಟ್ಸ್ ಆಫ್ ಟು ಯು ಸರ್. ಆಲ್ಸೋ, ಕಾಂಗ್ರ್ಯಾಚುಲೇಶನ್ಸ್